ಸಣ್ಣ ಕೈಗಾರಿಕೆಗಳ ಪುನಶ್ಚೇತನ

404 - ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಣ್ಣ ಕೈಗಾರಿಕೆಗಳ ಪುನಶ್ಚೇತನಕ್ಕೆ ರಾಜ್ಯ ಸರ್ಕಾರವು ಪ್ರತ್ಯೇಕ ಕೈಗಾರಿಕಾ ನೀತಿ ರೂಪಿಸಲು ನಿಶ್ಚಯಿಸಿದೆಯೇ?*

ಆ) *ಹಾಗಿದ್ದಲ್ಲಿ ಅದು ಎಂದಿನಿಂದ ಜಾರಿಗೆ ಬರಲಿದೆ? ಇದುವರೆಗೂ ಇದರ ಬಗ್ಗೆ ಸರ್ಕಾರ ಮಾಡಿರುವ ಪ್ರಯತ್ನಗಳೇನು?*

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

ಅ) ಹೌದು

ಆ) 1996ರಲ್ಲಿ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳ ಪುನಶ್ಚೇತನಕ್ಕಾಗಿ ರಚಿಸಿದ ನೀತಿಯನ್ನು ಇನ್ನೂ ಪರಿಣಾಮಕಾರಿಯಾಗಿ ಮಾಡುವ ದೃಷ್ಟಿಯಿಂದ ಸದರಿ ನೀತಿಯ ಪರಿಷ್ಕರಣೆಗೆ ಇಲಾಖಾ ಮಟ್ಟದಲ್ಲಿ ಒಂದು ಉಪಸಮಿತಿಯನ್ನು ರಚಿಸಲಾಗಿದ್ದು, ಉಪ ಸಮಿತಿಯು ಎಲ್ಲಾ ಸದಸ್ಯರಿಂದ ಮತ್ತು ಹಣಕಾಸು ಸಂಸ್ಥೆಗಳಿಂದ ಸಲಹೆಗಳನ್ನು ಪಡೆದು ಕರಡು ನೀತಿಯನ್ನು ತಯಾರಿಸಲಾಗುತ್ತಿದೆ.

ಸಣ್ಣ ಉದ್ದಿಮೆಗಳ ಸಮಸ್ಯೆ

405 - ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಸಣ್ಣ ಉದ್ದಿಮೆಗಳ ಸಮಸ್ಯೆಗಳನ್ನು ಪರಿಹರಿಸಲು ಮಾನ್ಯ ಮುಖ್ಯಮಂತ್ರಿಗಳು ವಿವಿಧ ಇಲಾಖೆಗಳ ಮುಖ್ಯಸ್ಥರ ಸಭೆ ಕರೆದು ಆದಾಲತ್ ನಡೆಸಲು ಯೋಚಿಸಿದ್ದಾರೆಯೇ?*

ಆ) *ಹಾಗಿದ್ದಲ್ಲಿ ಈ ರೀತಿ ಆದಾಲತ್ ನಡೆಸುವುದರಿಂದ ಸಣ್ಣ ಕೈಗಾರಿಕೆಗಳ ಪುನರುಜ್ಜೀವನಕ್ಕೆ ಅನುಕೂಲ ಆಗುವುದೆಂದು ಸರ್ಕಾರ ಭಾವಿಸಿದೆಯೇ?*

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಆಲಮಟ್ಟಿ ಜಲಾಶಯದಿಂದ ಮುಳುಗಡೆಯಾದ ಬಾಗಲಕೋಟೆ ನಗರದ ಅಭಿವೃದ್ಧಿ

406 - ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಳೆದ 36 ವರ್ಷದಿಂದ ನೆನಗುದಿಗೆ ಬೀಳುತ್ತ ಬಂದ ಆಲಮಟ್ಟಿ ಜಲಾಶಯದ*

ಮುಳುಗಡೆಯ, ದೊಡ್ಡನಗರ ಬಾಗಲಕೋಟೆ ಅಭಿವೃದ್ಧಿಯಿಲ್ಲದೇ ಅತಂತ್ರ ಸ್ಥಿತಿಯಲ್ಲಿದೆ. ನಗರದ ವ್ಯಾಪಾರಸ್ಥರು ಶಿಕ್ಷಕರು, ನೌಕರರು ತಮ್ಮ ತಮ್ಮಲ್ಲಿಯೇ ಸಹಕಾರ ಸಂಘಗಳನ್ನು ರಚಿಸಿ, ವಿದ್ಯಾಗಿರಿ ವಲಯ ಅಭಿವೃದ್ಧಿಪಡಿಸಿ ಕಳೆದ 10 ವರ್ಷದಿಂದ ಸುಮಾರು 2000ದಷ್ಟು ಮನೆಗಳನ್ನು ನಿರ್ಮಿಸಿ ಅಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಸಮರ್ಪಕ ರಸ್ತೆ ಒಳಚರಂಡಿ ವ್ಯವಸ್ಥೆ, ದಾರಿದೀಪಗಳ ವ್ಯವಸ್ಥೆ ಇಲ್ಲದಿರುವುದು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ನಗರಾಭಿವೃದ್ಧಿ ಇಲಾಖೆ ಮೂಲಭೂತ ಸೌಕರ್ಯ ನೀಡುವ ನಿಟ್ಟಿನಲ್ಲಿ ಹಾಕಿಕೊಂಡ ಕಾರ್ಯಕ್ರಮಗಳೇನು?

ಇ) ಅವು ಯಾವ ಹಂತದಲ್ಲಿದೆ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ) ಬಂದಿದೆ.

ಆ) ವಿದ್ಯಾಗಿರಿಯ ಬಡಾವಣೆಯಲ್ಲಿ ಒಟ್ಟು ರಿ.ಸ.ನಂ. 125 ರಿಂದ 131ರವರೆಗೆ ವಿನ್ಯಾಸಗಳಿದ್ದು ಅವುಗಳಲ್ಲಿ ನಂ. 123, 125 ಇವುಗಳನ್ನು ಹೊರತುಪಡಿಸಿ ಎಲ್ಲಾ ವಿನ್ಯಾಸಗಳು ಅನಧಿಕೃತವಾಗಿವೆ. ವಿನ್ಯಾಸದ ಮಾಲೀಕರು ನಗರಸಭೆಗೆ ಬಿಟ್ಟುಕೊಡಬೇಕಾದ ರಸ್ತೆಗಳನ್ನು ಹಾಗೂ ಇನ್ನಿತರ ಕಾಯ್ದಿರಿಸಿದ ಜಾಗಗಳನ್ನು ನಗರ ಸಭೆಗೆ ಹಸ್ತಾಂತರಿಸಿರುವುದಿಲ್ಲ. ಆದಾಗ್ಯೂ ಸಹ ಬಾಗಲಕೋಟೆ ನಗರಸಭೆಯವರು ಸದರಿ ಬಡಾವಣೆಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಂಡಿದ್ದಾರೆ.

ಕಾಮಗಾರಿಗಳ ವಿವರ	ಸಂಖ್ಯೆ
ನಗರಸಭೆಯಿಂದ ಕೈಗೊಂಡ ಕಾಮಗಾರಿಗಳು :	
1. ಖಡಿ ಗರಸು ಹಾಕಿ ರಸ್ತೆ ನಿರ್ಮಾಣ ಮಾಡಿದ್ದು	2
2. ಚರಂಡಿ ನಿರ್ಮಾಣ ಹಾಗೂ ದುರಸ್ತಿ ಕೆಲಸ	1
3. ಕುಡಿಯುವ ನೀರಿನ ಸಲುವಾಗಿ ಕೊಳವೆ ಬಾವಿಗೆ ಪವರ್ ಪಂಪ್ ಅಳವಡಿಸಿ ಚಿಕ್ಕ ನೀರು ಸರಬರಾಜು ಯೋಜನೆ ಕೈಗೊಂಡಿದೆ.	4
2.10ನೇ ಹಣಕಾಸು ಯೋಜನೆ ಅಡಿಯಲ್ಲಿ :	
1. ಖಡಿ ಗರಸು ಹಾಕಿ ರಸ್ತೆಗಳ ನಿರ್ಮಾಣ ಮಾಡಿದ್ದು	14
2. ಚರದಡಿ ನಿರ್ಮಾಣ ಹಾಗೂ ದುರಸ್ತಿ	2
3. ಕುಡಿಯುವ ನೀರಿನ ಸಲುವಾಗಿ ಕೊಳವೆ ಬಾವಿಗೆ ಪವರ್‌ಪಂಪ್ ಅಳವಡಿಸಿ ಚಿಕ್ಕ ನೀರು ಸರಬರಾಜು ಯೋಜನೆ ಕೈಗೊಂಡಿದ್ದು	1

4. ವಾಣಿಜ್ಯ ಮಳಿಗೆಗಳ ಕಟ್ಟಡ ಕೆಲಸ ಪ್ರಗತಿಯಲ್ಲಿದೆ. 2

3. ಪ್ರಧಾನಮಂತ್ರಿಗಳ ಸಮಗ್ರ ಬಡತನ ನಿರ್ಮೂಲನೆ ಯೋಜನೆಯ ಅಡಿಯಲ್ಲಿ ಕೈಗೊಂಡ ಕಾಮಗಾರಿಗಳು :

1. ಖಡಿ ಗರಸು ಹಾಕಿ ರಸ್ತೆಗಳ ನಿರ್ಮಾಣ ಮಾಡಿದ್ದು 3

2. ಚರಂಡಿ ನಿರ್ಮಾಣ ಹಾಗೂ ದುರಸ್ತಿ 3

3. ಬೀದಿ ದೀಪಗಳ ದುರಸ್ತಿ ವ್ಯವಸ್ಥೆ 75 ಟ್ಯೂಬ್‌ಸೆಟ್
1. ಸೋಡಿಯಂ ಲ್ಯಾಂಪ್
1. ಮರ್‌ಕ್ಯೂರಿ ಲ್ಯಾಂಪ್

4. ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆಯಡಿಯಲ್ಲಿ :

1. ರಿ.ಸ.ನಂ.130 ಬೆಳಗಾವ್-ರಾಯಚೂರು ರಸ್ತೆಯಿಂದ 1 ಬಿ.ವಿ.ಕಾಲೇಜ್ 1
ಕಾಲನಿಯವರೆಗೆ ರಸ್ತೆ ನಿರ್ಮಿಸುವುದು (ಸದರಿ ಯೋಜನೆ ಯಡಿಯಲ್ಲಿ)
ಕೈಗೊಂಡ ಕಾಮಗಾರಿಗಳಲ್ಲಿ ಉಳಿಕೆ ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ
ಮಂಜೂರಿ ದೊರಕಿದೆ.

ಇ) ಸದರಿ ಕಾಮಗಾರಿಗಳು ಈಗ ಮುಗಿಯವ ಹಂತದಲ್ಲಿ ಇರುತ್ತವೆ.

ಬೀದರ್ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆ

407 - ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ವತಿಯಿಂದ ಕುಡಿಯುವ ನೀರಿನ ಯೋಜನೆಗಳು ಕಾರ್ಯಗತವಾಗುತ್ತಿವೆ. (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಈ ಯೋಜನೆಗಳಿಗೆ ಒದಗಿಸಲಾಗಿರುವ ಹಣವೆಷ್ಟು? (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು).

ಇ) ಬಾಲ್ಕಿ ಪಟ್ಟಣದಲ್ಲಿ ಬೇಸಿಗೆಯ ಸಮಯದಲ್ಲಿ ತೀವ್ರವಾದ ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತಿದ್ದು ಇದನ್ನು ಪರಿಹರಿಸಲು ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯು ಶಾಶ್ವತ ಕುಡಿಯುವ ನೀರಿನ ಯೋಜನೆಗಳನ್ನು ಕೈಗೊಂಡಿದೆಯೇ?

ಈ) ಇಲ್ಲವಾದಲ್ಲಿ ಕಾರಣಗಳೇನು?